<u>ಅಸಲು ದಾವಾ ಸಂಖ್ಯೆ **-207/2021**</u> ಪಿ.ಡಬ್ಲ್ಯೂ.**:-2**

ದಿನಾಂಕಃ **24.10.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನನ್ನ ಹೆಸರು ಎಂ.ಮಂಜಪ್ಪ. ನಾನು ಹೊನ್ನಾಳಿ ಹೆಚ್ಚುವರಿ ನ್ಯಾಯಾಲಯದಲ್ಲಿ ರುದ್ರಮ್ಮ, ಚನ್ನಪ್ಪ ಮತ್ತು ಧ್ರಾಕ್ಷಾಯಿಣಮ್ಮರವರ ವಿರುದ್ಧ ಅಸಲು ದಾವಾ ಸಂಖ್ಯೆ 208/2021 ರ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಮೇಲ್ಕಂಡ ದಾವೆಯನ್ನು ಸಹ ಪ್ರಸ್ತುತ ದಾವೆಯ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ಮತ್ತು ಮಲ್ಲೇಶಪ್ಪ ಒಂದೇ ಬಾರಿಗೆ ದಾವೆಗಳನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ನಾನು ಮತ್ತು ಮಲ್ಲೇಶಪ್ಪರವರು ದಾವೆಗಳನ್ನು ಒಂದೇ ಬಾರಿಗೆ ಸಲ್ಲಿಸಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ನನಗೆ ಸೇರಿದ ಆಸ್ತಿ ಇರುತ್ತದೆ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ನನ್ನ ಆಸ್ತಿ ಇರುವುದರಿಂದ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿದ್ದೇನೆ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ನನಗೆ ಸೇರಿದ ಆಸ್ತಿ ಇದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಆದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ವಾದಿಯು ದಾವಾ ಆಸ್ತಿಯ ಖಾತೆ ಮತ್ತು ಪಹಣಿ ತಮ್ಮ ಹೆಸರಿಗೆ ಬರಲಿ ಎನ್ನುವ ಕಾರಣಕ್ಕಾಗಿ ದಾವೆಯನ್ನು ಸಲ್ಲಿಸಿದ್ದಾರೆ. ದಾವಾ ಆಸ್ತಿಯ ಖಾತೆ ಈಗ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ದಾವಾ ಆಸ್ತಿಯ ಖಾತೆಯು ಪ್ರತಿವಾದಿಗೆ ಅವರ ಗಂಡನ ಹೆಸರಿನಿಂದ ಖಾತೆಯಾಗಿರುತ್ತದೆ. ದಾವಾ ಆಸ್ತಿಯು ಪ್ರತಿವಾದಿಯ ಹೆಸರಿಗೆ ಇರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ವಾದಿಯ ಕುಟುಂಬದ ವಂಶವೃಕ್ಷವನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯ ಖರೀದಿ ಪತ್ರವು

ವಾದಿಯ ಹೆಸರಿಗೆ 1955-56 ನೇ ಸಾಲಿನಲ್ಲಿ ಆಗಿರುತ್ತದೆ. ವಾದಿಯ ಹೆಸರಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಪತ್ರವಾಗಿ ಈಗ್ಗೆ ಸುಮಾರು 60 ವರ್ಷಗಳಾಗಿರುತ್ತದೆ. ವಾದಿಯು ಕ್ರಯದ ಕರಾರು ಪತ್ರದ ಆಧಾರದ ಮೇಲೆ ದಾವಾ ಆಸ್ತಿಯ ಖಾತೆ ಮತ್ತು ಪಹಣಿ ತನ್ನ ಹೆಸರಿಗೆ ಮಾಡುವಂತೆ 1955-56 ನೇ ಸಾಲಿನಲ್ಲಿ ಸಲ್ಲಿಸಿರುವುದಿಲ್ಲ ಆದರೆ 8 ವರ್ಷಗಳ ನಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ವಾದಿಯು ಮೇಲೆ ಹೇಳಿದಂತೆ 8 ವರ್ಷಗಳ ನಂತರ ಖಾತೆ ಮತ್ತು ಪಹಣಿ ಬದಲಾವಣೆ ಮಾಡಲು ಸಲ್ಲಿಸಿದಂತ ಅರ್ಜಿಯ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕ್ರಯ ಪತ್ರವನ್ನು ನಾನು ಮತ್ತು ಮಲ್ಲೇಶಪ್ಪರವರು ಸೃಷ್ಟಿ ಮಾಡಿದಂತಹ ಕ್ರಯದ ಕರಾರು ಪತ್ರವಾಗಿದ್ದರಿಂದ ಖಾತೆ ಮತ್ತು ಪಹಣಿ ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.4/21 ರಲ್ಲಿ ಒಟ್ಟು 2 ಎಕರೆ 10 ಗುಂಟೆ ಜಮೀನು ಇರುತ್ತದೆ. ದಾವಾ ಆಸ್ತಿಯು ಮೂಲತಃ ಪ್ರತಿವಾದಿಯ ಮಾವನಾದ ರಾಮಪ್ಪರವರಿಗೆ ಸೇರಿದ್ದಾಗಿರುತ್ತದೆ. ದಾವಾ ಆಸ್ತಿಯು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಅಸಲು ದಾವಾ ಸಂಖ್ಯೆ 208/2021 ರ ದಾವಾ ಆಸ್ತಿಯು ಸಹ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ನನಗೆ ಓದು ಬರಹ ಬರುವುದಿಲ್ಲ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ಆಂಗ್ಲ ಭಾಷೆಯಲ್ಲಿ ನಮೂದಾಗಿದ್ದು ಅದಕ್ಕೆ ನಾನು ಸಹಿಯನ್ನು ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು  ನನಗೆ ಗೊತ್ತು. ಅದರಲ್ಲಿ ದಾವಾ ಆಸ್ತಿಯು ವಾದಿಗೆ ಸೇರಿದ್ದು ಎಂದು ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಪ್ರತಿವಾದಿಗೆ ಸೇರಿದ ಆಸ್ತಿ ಆಗಿದ್ದು ವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1955-56 ನೇ ಕ್ರಯ ಪತ್ರವು ವಾದಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾಲೀಕರು ಪ್ರತಿವಾದಿಯಾಗಿದ್ದು ಮತ್ತು ದಾವಾ ಆಸ್ತಿಯಲ್ಲಿ ಈಗ ಪ್ರತಿವಾದಿಯೇ ಸ್ವಾಧೀನಾನುಭವದಲ್ಲಿದ್ದಾರೆ ಹೊರತು ವಾದಿಯು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ

ಸರಿಯಲ್ಲ. ನಾನು ಮತ್ತು ವಾದಿಯು ಇಬ್ಬರೂ ಒಟ್ಟಿಗೆ ಪ್ರಸ್ತುತ ದಾವೆಯನ್ನು ಮತ್ತು ಅಸಲು ದಾವಾ ಸಂಖ್ಯೆ 208/2021 ರ ದಾವೆಯನ್ನು ಸಲ್ಲಿಸಿದ್ದರಿಂದ ಮತ್ತು ಒಬ್ಬರಿಗೊಬ್ಬರಿಗೆ ಅನುಕೂಲಮಾಡಿಕೊಳ್ಳುವ ಉದ್ದೇಶದಿಂದ ಮತ್ತು ದಾವಾ ಆಸ್ತಿಯನ್ನು ಪ್ರತಿವಾದಿಯಿಂದ ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಸ್ತುತ ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.